ಹೊರಗಿನಿಂದ ಬರುವುದು ಜ್ಞಾನವಲ್ಲ, ಆ ಜ್ಞಾನವಿರುವುದು ನಮ್ಮೊಳಗೆ; ಹೊರಗಿನಿಂದ ಬರುವುದು ಏನಿದ್ದರೂ ಸೂಚನೆ ಮಾತ್ರ ಎನ್ನುತ್ತಾರೆ ಸ್ವಾಮೀಜಿ. ವೇದಾಂತ ಹೇಳುವಂತೆ, ಎಲ್ಲ ಜ್ಞಾನವೂ ನಮ್ಮಲ್ಲೇ ಅಡಗಿದೆ. ನಮ್ಮೊಳಗಿರುವ ಆತ್ಮನಲ್ಲಿಯೇ ಎಲ್ಲ ಜ್ಞಾನವೂ ಅಂತರ್ಗತವಾಗಿದೆ. ಹಾಗೆ ಒಳಗಿದ್ದದ್ದರಿಂದಲೇ ನಮಗೆ ಎಲ್ಲ ಜ್ಞಾನವನ್ನೂ ಗಳಿಸುವುದು ಸಾಧ್ಯವಿದೆ. ಪ್ರಯತ್ನ, ಅಭ್ಯಾಸಗಳಿಂದ ಯಾವುದೇ ಜ್ಞಾನವನ್ನು ಪಡೆಯಬಹುದು ಎಂಬ ಸತ್ಯವನ್ನು ಈ ಅಂಶ ತೋರಿಸಿಕೊಡುತ್ತದೆ. ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕ, ಲೌಕಿಕ – ಎರಡೂ ಸಂದರ್ಭಗಳಲ್ಲಿ ವೇದಾಂತದ ಈ ತತ್ತ್ವವನ್ನು ಬಳಸಿಕೊಂಡು ಮಾನವನ ಆಂತರಿಕ ಹಾಗೂ ಬಾಹ್ಯ ವಿಕಸನವಾಗಬೇಕೆಂದು ಸಮರ್ಥವಾಗಿ ಪ್ರತಿಪಾದಿಸಿದರು. ಎಲ್ಲ ಸೃಷ್ಟಿಗೆ, ಜಗತ್ತಿನ ವ್ಯಾಪಾರಕ್ಕೆ ಭಗವಂತನೇ ಮೂಲ; ಎಲ್ಲವೂ ಅವನಿಂದಲೇ ಹುಟ್ಟುವುದು, ಅವನಲ್ಲೇ ಜೀವಿಸುವುದು, ಅವನ ಲಯಹೊಂದುವುವು ಎನ್ನುವ ಉಪನಿಷದ್ವಾಕ್ಯಕ್ಕೆ ಅನುಗುಣವಾಗಿ, ಎಲ್ಲ ಜ್ಞಾನವೂ ಭಗವಂತನಿಂದಲೇ ಹೊರಡುವುದು ಎಂದು ಕೂಡ ಹೇಳಬಹುದು. ಮಾನವನ ಅಂತರಂಗದಲ್ಲಿ ಭಗವಂತನೇ ನೆಲೆಸಿದ್ದಾನೆ – ಆದ್ದರಿಂದ ಅವನಲ್ಲೂ ಕೂಡ ಜ್ಞಾನವೆಲ್ಲ ಅಡಗಿದೆ. ಆಧ್ಯಾತ್ಮಿಕ ಅರ್ಥದಲ್ಲಿ ಸಾಕ್ಷಾತ್ಕಾರ ಹೊಂದಿದಾಗಲೇ ಈ ಪೂರ್ಣಜ್ಞಾನ ವಿಕಾಸ ಹೊಂದುವುದು. ಲೌಕಿಕವಾಗಿ, ವ್ಯಕ್ತಿಯು ಪ್ರೌಢನಾಗುವಾಗ, ಶಿಕ್ಷಣ ಹಾಗೂ ಅಧ್ಯಯನದಿಂದ ತನ್ನ ತಿಳಿವಳಿಕೆಯನ್ನು ವಿಸ್ತರಿಸಿಕೊಳ್ಳುತ್ತಾನೆ. ಆ ಮೂಲಕ ಅವನಲ್ಲಿ ಅಡಗಿದ್ದ ಜ್ಞಾನ ಪ್ರಕಟಗೊಳ್ಳುವುದು. ಮನುಷ್ಯ ತನ್ನಲ್ಲಿ ಅಡಗಿರುವ ಶಕ್ತಿಯನ್ನು ಅರಿತು ಅದನ್ನು ಪ್ರಯೋಗಿಸುವುದಕ್ಕೂ ಅರಿಯದೆ ಪ್ರಯೋಗಿಸುವುದಕ್ಕೂ ತುಂಬ ವ್ಯತ್ಯಾಸವಿದೆ. ಅಂತೆಯೇ, ನಮ್ಮಲ್ಲಿ ಅಗಾಧ ಜ್ಞಾನ ಅಡಗಿದೆ ಎಂಬ ಅರಿವಿನಿಂದ ಜ್ಞಾನಸಂಪಾದನೆ ಮಾಡುವುದಕ್ಕೂ, ಅದನ್ನು ಅರಿಯದೆ ಶಿಕ್ಷಣ ಹೊಂದುವುದಕ್ಕೂ ಅಗಾಧ ವ್ಯತ್ಯಾಸವಿದೆ. ಮೊದಲನೆಯದರಲ್ಲಿ ನಮ್ಮಲ್ಲಿ ನಾವು ಪೂರ್ಣ ನಿಯಂತ್ರಣ ಹೊಂದಿರುತ್ತೇವೆ. ಅದರಿಂದ ಲಭಿಸುವ ಸ್ಫೂರ್ತಿ, ಉತ್ಸಾಹ, ದೃಢವಿಶ್ವಾಸಗಳೇ ನಮ್ಮ ಜೀವನಕ್ಕೆ ಅತ್ಯಮೂಲ್ಯವಾಗಿ ಬೇಕಾಗಿರುವ ಸಂಗತಿಯಾಗಿವೆ.

## ಅರಿವಿನಾಚೆಯ ಹಾದಿ

ಅಜ್ಞಾನದಲ್ಲಿ ಜ್ಞಾನ ಉದಿಸಿ ಬಂತು, ಅಂತೆಯೇ ಮೌನದಲ್ಲಿ ಮಾತು ನಲಿದು ಬಂತು. ಅದಾದ ಬಳಿಕ ಮುಂದೇನು? ಮಾತು ಮೌನದಲ್ಲಿ ಲಯವಾಗುತ್ತದೆ. ಜ್ಞಾನ ಅವ್ಯಕ್ತದಲ್ಲಿ ಒಂದಾಗುತ್ತದೆ. ಸಾಮಾನ್ಯ ಬದುಕಿನಲ್ಲಿ ಹೀಗೆ ಮಾತು–ಮೌನಗಳ ಒಡನಾಟ ಅವ್ಯಾಹತವಾಗಿ ನಡೆದಿರುತ್ತದೆ. ಮಾತಿಗೆ ಮೂಲವಾದ ಸ್ಫುರಣೆಯುಂಟಾಗುವುದು ನಮ್ಮ ಮನಸ್ಸಿನ ಆಳದಲ್ಲಿ; ಮೌನಗರ್ಭದಲ್ಲಿ ಎಂದಾದರೂ ಹೇಳಬಹುದು. ಮನಸ್ಸಿನ ಮೇಲ್ಮೈಗೆ ಬರುವ ಮಾತು ಆಲೋಚನೆಯ ರೂಪದಲ್ಲಿ ಹೊರಹೊಮ್ಮುತ್ತದೆ. ಆಗ ಅದೊಂದು ಹೊಸ ಶಬ್ದವಾಗಿ, ಹೊಸ ವಾಕ್ಯವಾಗಿ ಮೂಡುವ ಸಾಧ್ಯತೆಯಿದೆ. ಇದರ ನಂತರ ಇನ್ನೊಂದು ಮಾತು, ಬಳಿಕ ಮತ್ತೊಂದು ಮಾತು – ಹೀಗೆ ಆಲೋಚನೆಯ, ಭಾಷೆಯ ಸರಣಿ ಮುಂದುವರೆಯುತ್ತ ಹೋಗುತ್ತದೆ. ಆದರೆ ನಿಜವಾದ ಜ್ಞಾನ ಅಡಗಿರುವುದ ಮಾತಿನಲ್ಲಲ್ಲ; ಮಾತಿನ ನಡುನಡುವೆ ಹೆಪ್ಪುಗಟ್ಟಿರುವ ಮೌನದಲ್ಲಿ. ಮಾತು ಎಂಬುದೊಂದು ಆಕೃತಿ; ಇಂಥ ಆಕೃತಿಗಳ ಭಾವ ಸೀಮಿತವಾದುದು. ಅದರಾಚೆಗೆ ಅವ್ಯಕ್ತವಾಗಿ ಹರಡಿರುವ ಮೌನವೇ ಅಸೀಮವಾದ, ಅಖಂಡವಾದ ಅವ್ಯಕ್ತ ಅರಿವು; ಎಲ್ಲವನ್ನೂ ವ್ಯಾಪಿಸಿರುವ ಸತ್ಯದ ನೆಲೆ. ಆದ್ದರಿಂದ ಮಾತು ಲಯಗೊಳ್ಳುವ ಮೌನದ ನೆಲೆಯೇ ಅಗಾಧ ವಿಶ್ರಾಂತಿಯ ಸ್ಥಾನ.

ಮಾತು ನಿಲ್ಲುವ ನೆಲೆಯಲ್ಲಿ ಆತ್ಮನ ನೈಜಸ್ವರೂಪವನ್ನು ಅರಿತುಕೊಂಡಾಗಲೇ ಮಾನವನ ಅರಿವು ತನ್ನ ಅಂತಿಮ ಗುರಿಯನ್ನು ತಲುಪುವುದು. ಇದನ್ನೇ ತೈತ್ತರೀಯೋಪನಿಷತ್ತಿನಲ್ಲಿ '**ಯತೋ ವಾಚೋ ನಿವರ್ತಂತೇ**' (ಎಲ್ಲಿ ಮಾತು ಹಿಂದಿರುಗುವುದೋ) ಎಂದು ವರ್ಣಿಸಲಾಗಿದೆ. ***(ತೈತ್ತಿರೀಯ, ೨.೪.೧)*** ಇದನ್ನೇ ಕಠೋಪನಿಷತ್ತು '**ನ ತತ್ರ ಸೂರ್ಯೋ ಭಾತಿ**' ***(ಕಠ, ೨.೨.೧೫)*** ಎಂದೂ, ಮಾಂಡೂಕ್ಯೋಪನಿಷತ್ತು '**ಪ್ರಪಂಚೋಪಶಮಂ**' ***(ಮಂತ್ರ ೭)*** ಎಂದೂ ಹೇಳುತ್ತದೆ. ಗ್ರಹಿಕೆಗೆ ನಿಲುಕದ, ಮಾತಿಗೆ ದಕ್ಕದ, ಸ್ಪಷ್ಟವಾದ ವಿವರಣೆ ಲಭ್ಯವಲ್ಲದ ಅಂಥ ವಿಶ್ರಾಂತ ಸ್ಥಿತಿಯನ್ನು ಧ್ಯಾನವೇ ಮೊದಲಾದ ಸಾಧನೆಗಳಿಂದ ಪಡೆದುಕೊಳ್ಳಬೇಕೆಂದು ಉಪನಿಷತ್ತು ಹೇಳುತ್ತದೆ. ಯೋಗ, ವೇದಾಂತ ಹಾಗೂ ಸಾಧುಸಂತರುಗಳ ಉಪದೇಶದ ಸಾರವಿದು: ಶಬ್ದಗಳ ಗದ್ದಲ ನಿಂತು, ಮೌನಕ್ಕೆ ಶರಣಾಗಬೇಕು. ಆಗ ಸತ್ಯದ ಅನುಭವವಾಗುವುದು. ಇದು ಅರಿವಿನಾಚೆಯ ಹಾದಿ. ಆದರೆ, ಎಲ್ಲ ಅರಿವನ್ನು ಹೊಂದಿದ ನಂತರವೇ ಈ ಸ್ಥಿತಿ ಲಭ್ಯವಾಗುವುದೊಂದು ಆಶ್ಚರ್ಯ.

## ಮೈಮರೆವ ವಿಸ್ಮಯ

ಪ್ರಪಂಚದ ಆಗುಹೋಗುಗಳು, ಮಾನವನ ಕ್ರಿಯಾಕಲಾಪಗಳು – ಪ್ರತಿಯೊಂದೂ ಮನಸ್ಸಿನಲ್ಲಿ ಮೂಡುವ ಭಾವನೆಗಳನ್ನೇ ಅವಲಂಬಿಸಿವೆ. ಹೀಗೆ ಕ್ಷಣಕ್ಷಣವೂ ಮೂಡುವ ಭಾವಗಳ ಮೂರ್ತರೂಪವೇ ಭಾಷೆ. ಈ ಭಾವಗಳು ಇಲ್ಲವಾದಾಗ ವ್ಯಾಪಿಸಿಕೊಳ್ಳುವ ಮಹಾಮೌನವೇ ಒಂದು ಬಗೆ ತನ್ಮಯತೆ; ಅದೇ ಒಂದು ವಿಧವಾದ ಇಂದ್ರಿಯಾತೀತ ಅನುಭವ. ಮಾತನ್ನು ಮೀರಿದ ಅನುಭವ ಎಲ್ಲರಿಗೂ ಉಂಟಾಗುತ್ತದೆ; ಮಾತಿಗೆ ನಿಲುಕದ ಭಾವನೆಗಳನ್ನು ಉಂಟುಮಾಡುತ್ತದೆ. ಅಷ್ಟಕ್ಕೇ ನಾವು ಮೈಮರೆತು, 'ಅಬ್ಬಾ! ಏನಾಶ್ಚರ್ಯ!' ಎಂದು ಉದ್ಗರಿಸುತ್ತೇವೆ. ಪ್ರಕೃತಿಯ ಅದ್ಭುತಗಳನ್ನು ಕಂಡಾಗ ಮೈಮರೆತು ನಾವು ಉದ್ಗರಿಸುತ್ತೇವೆ, ಅಲ್ಲಿ ಮಾತು ಮೂಕವಾಗುತ್ತದೆ. ಆದರೆ ನಮ್ಮ ಅಂತರಂಗದಲ್ಲಿ ಮಾತುಗಳೆಲ್ಲ ಮರೆಯಾಗಿ, ಎಲ್ಲೆಯಿಲ್ಲದ ಅನಂತದಲ್ಲಿ ನಾವು ನೆಲೆ ನಿಲ್ಲುವುದು ಸಾಧಾರಣ ಅನುಭವವಲ್ಲ; ಧ್ಯಾನ, ಏಕಾಗ್ರತೆಗಳಿಂದ ಮಾತ್ರ ಲಭ್ಯವಾಗುವ ಅನುಭವ. ಅಸಾಧಾರಣ ಅನುಭವವನ್ನು ಅರಿತವನು ಉದ್ಗರಿಸುವುದಿಷ್ಟೇ – 'ಅದು ಅವಾಙ್ಮಾನಸ ಗೋಚರ, ಅದನ್ನು ಯಾರು ಅರಿಯುವನೋ, ಅವನಿಗೆ ಮಾತ್ರ ತಿಳಿಯುವುದು.' –*(ಸ್ವಾಮಿ ವಿವೇಕಾನಂದರ ಬಂಗಾಳಿ ಕವಿತೆ, '**ಪ್ರಲಯ್ ವಾ ಗಭೀರ್ ಸಮಾಧಿ**', ಕೃತಿಶ್ರೇಣಿ, ಸಂ.೮, ಪು.೫೦೪)* ✽